



# ಅನನ್ಯ ಆರ್ಟ್ ಗ್ಯಾಲರಿ!

ದಕ್ಷಿಣ ಫ್ರಾನ್ಸ್‌ನ ಬಾಕ್ಸ್ ಡಿ ಪ್ರಾಂತ್ಯದ ಅರ್ಲೆಸ್‌ನ ಈಶಾನ್ಯಕ್ಕೆ 15 ಕಿಲೋಮೀಟರ್ ದೂರದಲ್ಲಿ ಎಂಥವರನ್ನೂ ಮಂತ್ರಮುಗ್ಧಗೊಳಿಸುವಂತಹ ವಿಶಿಷ್ಟವಾದ ಕಲಾ ಪ್ರದರ್ಶನ ಜಾಗವಿದೆ. ಈ ಪ್ರದೇಶವು ಮೊದಲು ಸುಣ್ಣದ ಕಲ್ಲುಗಳಿಂದ ಕೂಡಿದ್ದು ಇಂದು ಕಲೆ ಹಾಗೂ ಸಂಗೀತಕ್ಕೆ ಸಮರ್ಪಿತವಾದ ಅಸಾಮಾನ್ಯ ಮಲ್ಟಿಮೀಡಿಯ ಪ್ರದರ್ಶನ ಸ್ಥಳವಾಗಿದೆ.

ವಿಶ್ವದಲ್ಲೇ ಅನನ್ಯವಾಗಿರುವ ಇದನ್ನು'ಕಾರಿಯರ್ಸ್ ಡಿ ಲುಮಿಯರ್ಸ್' ಅಥವಾ 'ಲೈಟ್ ಆಫ್ ಕ್ವಾರೀಸ್' ಎಂದು ಕರೆಯಲಾಗುತ್ತದೆ. ಅನೇಕ ಶತಮಾನಗಳವರೆಗೆ ಹತ್ತಿರದ ಪಟ್ಟಣಗಳನ್ನು ನಿರ್ಮಿಸುವ ಸಲುವಾಗಿ ಅಲ್ಪಿಲೆಸ್ ಪರ್ವತಗಳ ಕಲ್ಲು ಗಣಿಗಳಿಂದ ಸುಣ್ಣವನ್ನು ತೆಗೆಯಲಾಯಿತು. ಆದರೆ 20ನೇ ಶತಮಾನದಲ್ಲಿ ಕಲ್ಲಿನ ಬದಲಾಗಿ ಉಕ್ಕಿನಂತಹ ಹೊಸ ಕಟ್ಟಡ ಸಾಮಗ್ರಿಗಳ ಬಳಕೆ ಪ್ರಾರಂಭವಾಗಿ ಸುಣ್ಣದ ಬೇಡಿಕೆ ಕುಸಿಯಿತು. ಇದು ಕ್ವಾರಿ ಚಾಲನೆಯ ನಿರ್ವಹಣೆಗೆ ಹೊಡೆತ ಬಿದ್ದು 1930ರಲ್ಲಿ ಪೂರ್ತಿಯಾಗಿ ಮುಚ್ಚಲ್ಪಟ್ಟಿತು.

ಸುಣ್ಣದ ಹೊರತೆಗೆಯುವಿಕೆಯಿಂದ ರಚಿಸಲ್ಪಟ್ಟ ದೈತ್ಯಾಕಾರದ ಖಾಲಿ ಕೋಣೆಗಳು ಕಲಾತ್ಮಕ ಸ್ಥಳಗಳಾಗಿ ಮಾರ್ಪಟ್ಟವು. ಗೋಡೆಗಳ ಮೇಲೆ ಚೌಕಟ್ಟಿನ ಕಲಾಕೃತಿಗಳನ್ನು ನೇತು ಹಾಕುವ ಬದಲು, ಗೋಡೆಗಳು ಸೀಲಿಂಗ್(ಮೇಲ್ಛಾವಣಿ)ಗಳು ಹಾಗೂ ಮಹಡಿಗಳ ಮೇಲೆ ಪ್ರೊಜೆಕ್ಟರ್ ಬಳಸಿ ಬಣ್ಣದ ಬೆಳಕನ್ನು ಚಿತ್ರಿಸಲಾಗುತ್ತದೆ. ಸ್ತಬ್ಧ ಹಾಗೂ ಆನಿಮೇಟೆಡ್ ಚಿತ್ರಗಳು ಇತರೆ ಕಲಾಕೃತಿಗಳು ಎಲ್ಲಾ ಜಾಗವನ್ನು ಆವರಿಸಿಕೊಂಡು ಜೀವಂತಿಕೆಯನ್ನು ಪಡೆದುಕೊಳ್ಳುತ್ತವೆ. ಎತ್ತ ನೋಡಿದರತ್ತ ಅಚ್ಚರಿಯನ್ನುಂಟು ಮಾಡುವ ಚಿತ್ರ ಪ್ರದರ್ಶನವು ಆತ್ಮಸಂವೇದನೆಯನ್ನುಂಟು ಮಾಡುತ್ತದೆ. ಪರಿಪೂರ್ಣವಾದ ಸಂಗೀತದೊಂದಿಗೆ ಆಕರ್ಷಕ ಲೈವ್ ಚಿತ್ರಗಳು ಮನಸ್ಸನ್ನು ಮುದಗೊಳಿಸುತ್ತವೆ.

■ ವಿನಯ್‌ಕುಮಾರ್ ಬಿ.ಎಚ್.